## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ 2011ರ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಸಕಾಲ ಮಂಡಳಿಯ ಜಿಲ್ಲಾ ಮಾಹಿತಿ ಸಮಾಲೋಚಕರಿಗೆ ಡಾಟಾ ಕಾರ್ಡ್‌ಗಳನ್ನು ನೀಡುವ ಬಗ್ಗೆ.

ಓದಲಾಗಿದೆ:

1. ಅಧಿಸೂಚನೆ ಸಂಖ್ಯೆ:ಸಿಆಸುಇ 28 ಇಕಾಅ 2012, ದಿನಾಂಕ: 28ನೇ ಮಾರ್ಚ್ 2012.
2. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 20 ಇಕಾಅ 2012, ದಿನಾಂಕ: 06.03.2012.
3. ದಿನಾಂಕ: 14-02-2013 ರಂದು ನಡೆದ TAP ಸಭೆಯ ನಡವಳಿಗಳು.

ಪ್ರಸ್ತಾವನೆ:

ಮೇಲೆ (1)ರಲ್ಲಿ ಓದಲಾದ ಅಧಿಸೂಚನೆಯಲ್ಲಿ 11 ಇಲಾಖೆಗಳ ಮುಖಾಂತರ 151 ಕಾಲಮಿತಿ ಸೇವೆಯನ್ನು ನಾಗರೀಕರಿಗೆ ಒದಗಿಸಲು, ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ, 2011 (2012ರ ಕರ್ನಾಟಕ ಅಧಿನಿಯಮ ಸಂಖ್ಯೆ 01)ರ 1ನೇ ಪ್ರಕರಣ (2) ನೇ ಉಪ ಪ್ರಕರಣದಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ದಿನಾಂಕ: 27ನೇ ಫೆಬ್ರವರಿ 2012 ರಂದು ಹೊರಡಿಸಿದ್ದ ಅಧಿಸೂಚನೆಯನ್ನು ಮಾರ್ಪಡಿಸಿ, ಕರ್ನಾಟಕ ಸರ್ಕಾರದ ದಿನಾಂಕ: 2ನೇ ಏಪ್ರಿಲ್ 2012ನ್ನು ಕರ್ನಾಟಕ ಸಕಾಲ ಸೇವೆಗಳ ಖಾತರಿ ಅಧಿನಿಯಮ 2011, ಕರ್ನಾಟಕ ರಾಜ್ಯಾದ್ಯಂತ ಜಾರಿಗೆ ಬರುವ ದಿನಾಂಕವೆಂದು ಅಧಿಸೂಚನೆ ಹೊರಡಿಸಲಾಗಿದೆ.

ಮೇಲೆ ಓದಲಾದ ಉಲ್ಲೇಖ (2) ರಲ್ಲಿ ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ 2011 ಅನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ರೂ.5.00 ಕೋಟಿಗಳ ವೆಚ್ಚದಲ್ಲಿ ಕೆಲವು ಅಧಿಕಾರಿ ಸಿಬ್ಬಂದಿಯೊಂದಿಗೆ ಸಕಾಲ ಮಂಡಳಿ (ಮಿಷನ್ ಮೋಡ್) ಯನ್ನು ರಚಿಸಿ ದಿನಾಂಕ: 06.03.2012ರಂದು ಆದೇಶ ಹೊರಡಿಸಲಾಗಿದೆ.

ಮೇಲೆ (3) ರಲ್ಲಿ ಓದಲಾದ ಸರ್ಕಾರದ ಕಾರ್ಯದರ್ಶಿಗಳು (ಆಸು) ಇವರ ಅದ್ಯಕ್ಷತೆಯಲ್ಲಿ ನಡೆದ TAP ಸಬೆಯಲ್ಲಿ 30 ಜಿಲ್ಲೆಗಳ ಮಾಹಿತಿ ಸಮಾಲೋಚಕರಿಗೆ ಡಾಟಾ ಕಾರ್ಡ್‌ಗಳನ್ನು ನೀಡಬೇಕೆಂದು ತೀರ್ಮಾನಿಸಲಾಗಿದೆ. ಒಂದು ಡಾಟಾ ಕಾರ್ಡ್‌ನ ಬೆಲೆ ರೂ 950/-ಆಗಿದ್ದು ಎಲ್ಲಾ 30 ಜಿಲ್ಲಾ ಮಾಹಿತಿ ಸಮಾಲೋಚಕರಿಗೆ 30 ಡಾಟಾ ಕಾರ್ಡ್ ಒದಗಿಸಬೇಕಿದ್ದು ಇದರ ಒಟ್ಟು ಮೊತ್ತ ರೂ 28,500/- ಆಗುತ್ತದೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 105 ನಾಸೇಆ 2013**

**ಬೆಂಗಳೂರು, ದಿನಾಂಕ: 02.4.2013.**

ಮೇಲಿನ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಒಂದು ಡಾಟಾ ಕಾರ್ಡ್‌ನ ಬೆಲೆ ರೂ 950/-ಆಗಿದ್ದು ಮತ್ತು ಪ್ರತಿ ಮಾಹೆಯ ಬಳಕೆಯ ಮೊತ್ತ ಗರಿಷ್ಟ ಮಿತಿ ಅಂದರೆ ರೂ 1,100/- ನಿಗಧಿಪಡಿಸಲಾಗಿದ್ದು ಈ ಕೆಳಕಂಡಂತೆ ಅನುದಾನ ಬಿಡುಗಡೆ ಮಾಡಲಾಗಿದೆ.

(ಅ) ಒಂದು ಡಾಟಾ ಕಾರ್ಡ್‌ನ ಮೂಲ ಬೆಲೆ ರೂ 950/-ಆಗಿದ್ದು ಎಲ್ಲಾ 30 ಜಿಲ್ಲೆಗಳಿಗೆ ಇದರ ಒಟ್ಟು ಮೊತ್ತ ರೂ 28,500-00

(ಆ) ಪ್ರತಿ ಮಾಹೆಯ ಬಳಕೆಯ ಮೊತ್ತ ಗರಿಷ್ಟ ಮಿತಿ ಅಂದರೆ ರೂ 1,100/- X 12 X 30 = ರೂ 3,96,000-00

ಒಟ್ಟು ಮೊತ್ತ ರೂ 4,24,500-00

(ರೂ ನಾಲ್ಕು ಲಕ್ಷದ ಇಪ್ಪತ್ತನಾಲ್ಕು ಸಾವಿರದ ಐದುನೂರು ಮಾತ್ರ)

ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ 2011ರ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಸಕಾಲ ಮಂಡಳಿಯ ಜಿಲ್ಲಾ ಮಾಹಿತಿ ಸಮಾಲೋಚಕರಿಗೆ ಡಾಟಾ ಕಾರ್ಡ್‌ಗಳನ್ನು ಈ ಕೆಳಕಂಡ ಷರತ್ತಿಗೊಳಪಟ್ಟು ನೀಡಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

1. ಡಿ.ಐ.ಟಿ.ಸಿಗಳು ಉತ್ತಮ ಸೇವೆ ನೀಡುತ್ತಿರುವಂತಹ ಉತ್ಪಾದಕರಿಂದ ಈ ಕೆಳಕಂಡ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಖರೀದಿಸಬೇಕಾಗುತ್ತದೆ/ ಆಯ್ದುಕೊಳ್ಳಬಹುದು.
2. TRAI ರೆಗ್ಯುಲೇಷನ್ ಪ್ರಕಾರ ಉಪಯೋಗವು ಮಾಹಿತಿ ತಂತ್ರಜ್ಞಾನ ಕಾನೂನು ಪರೀದಿಯಲ್ಲಿರಬೇಕು.
3. ಮಂಡಳಿಯ ಕಾರ್ಯನಿರ್ವಹಣೆಗಷ್ಟೆ ಸೀಮಿತದಲ್ಲಿರಬೇಕು ಸಮಾಜಬಾಹಿರ ಚಟುವಟಿಕೆಗಳಿಗೆ ಅಥವಾ ಅಕ್ರಮ ಕಾರ್ಯಗಳಿಗೆ ಉಪಯೋಗಿಸುವುದು ಕಾನೂನುಬಾಹಿರ.
4. ಎಲ್ಲಾ ಜಿಲ್ಲಾ ಮಾಹಿತಿ ಸಮಾಲೋಚಕರಿಗೆ ಡಾಟಾ ಕಾರ್ಡ್‌ಗಳ ಪ್ರತಿ ಮಾಹೆಯ ಬಳಕೆಯ ಮೊತ್ತ ಗರಿಷ್ಟ ಮಿತಿ ಅಂದರೆ ರೂ 1,100/- ನಿಗಧಿಪಡಿಸಲಾಗಿದೆ ಹಾಗೂ ಇದನ್ನು ಪಾಲಿಸುವಂತೆ ನಿಭಂದಿಸಲಾಗಿದೆ.

5. ಕಾರ್ಡ್‌ಗಳು ಬಳಕೆದಾರರ ಹೆಸರಿಗೆ ನೊಂದಣಿಯಾಗಿರುತ್ತವೆ, ಹಾಗೂ ಯೊವುದೇ ವಿಚಾರಣೆಗೆ ಸಂಭಂದಿಸಿದಂತೆ ಆ ಮೂಲಕ ಗುರುತಿಸಲ್ಪಡುತ್ತವೆ.

6. ಸಂಪರ್ಕವನ್ನು ಜಿಲ್ಲಾ ಮಾಹಿತಿ ಸಮಾಲೋಚಕರ ಹೆಸರಿನಲ್ಲಿ ಪಡೆದು ಬಿಲ್ಲಿನ ಮೊತ್ತವನ್ನು ಜಿಲ್ಲಾದಿಕಾರಿಗಳಿಗೆ ಬಿಡುಗಡೆಯಾದ ಸಕಾಲ ಮಂಡಳಿಯ ಅನುದಾನದಲ್ಲಿ ಭರಿಸತಕ್ಕದ್ದು.

ಸದರಿ ವೆಚ್ಚವನ್ನು 2013-14ನೇ ಸಾಲಿನ ಆರ್ಥಿಕ ಇಲಾಖೆ ಲೆಕ್ಕ ಶೀರ್ಷಿಕೆ ಸಂಖ್ಯೆ: 2052-00-090-0-26-051 (ಯೋಜನೇತರ) ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ 2011 ದಡಿ ಒದಗಿಸಲಾದ ಅನುದಾನದಲ್ಲಿ ಭರಿಸುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಆಇ 1049: ವೆಚ್ಚ-12/2012, ಆರ್ಥಿಕ ಇಲಾಖೆ (ವೆಚ್ಚ-12), ದಿನಾಂಕ: 21/03/2013 ರಂತೆ ಆರ್ಥಿಕ ಇಲಾಖೆಯು ನೀಡಿರುವ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

**ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ**
**ಮತ್ತು ಅವರ ಹೆಸರಿನಲ್ಲಿ**

Gayathri 2/4/13
**(ಸಿ.ಎ.ಗಾಯತ್ರಿ)**
**ಸರ್ಕಾರದ ಅಧೀನ ಕಾರ್ಯದರ್ಶಿ,**
**ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ,**
**(ಆಸು-ನಾಗರೀಕ ಸೇವೆಗಳು).**

ಗೆ,

1. ಕರ್ನಾಟಕ ಮಹಾಲೇಖಪಾಲರು, (ಲೆಕ್ಕ ಮತ್ತು ಪರಿಶೋಧನೆ), ಕರ್ನಾಟಕ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, (ಆಯವ್ಯಯ ಮತ್ತು ಸಂಪನ್ಮೂಲ), ಆರ್ಥಿಕ ಇಲಾಖೆ.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಿಆಸುಇ (ಲೆಕ್ಕಪತ್ರ 1 ಮತ್ತು 2)
4. ನಿರ್ದೇಶಕರು, ಖಜಾನೆ ಇಲಾಖೆ, ಪೋಡಿಯಂ ಬ್ಲಾಕ್, ಡಾ. ಅಂಬೇಡ್ಕರ್ ವೀದಿ, ಬೆಂಗಳೂರು.
5. ಜಂಟಿ ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
6. ಅಪರ ಮಿಷನ್ ನಿರ್ದೇಕರು, ಸಕಾಲ ಮಿಷನ್, ವಿಶ್ವೇಶ್ವರಯ್ಯ ಮುಖ್ಯ ಗೋಪುರ, 20ನೇ ಮಹಡಿ, ಬೆಂಗಳೂರು.
7. ಆಡಳಿತಾಧಿಕಾರಿ, ಸಕಾಲ ಮಿಷನ್, ಬಹುಮಹಡಿ ಕಟ್ಟಡ, ಬೆಂಗಳೂರು.
8. ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳು/ ಎಲ್ಲಾ ಜಿಲ್ಲೆಯ ಖಜಾನಾದಿಕಾರಿಗಳು
9. ಹೆಚ್ಚುವರಿ ಪ್ರತಿಗಳು/ಶಾಖಾ ರಕ್ಷಾ ಕಡತ/ವಾರದ ರಾಜ್ಯಪತ್ರ.